# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂ: 116/2017**
**ಪಿ.ಡಬ್ಲ್ಯೂ: ಅಬ್ದುಲ ಗಣಿ**

**ದಿನಾಂಕ : 11-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**
ಪಾಟಿ ಸವಾಲು :- ಶ್ರೀ ಕೆ ಜಿ ಕೆ ವಕೀಲರಿಂದ

ನನ್ನ ತಂದೆ ಮಹೆಬೂಬಸಾಬ ಇವರೆ ಇಬ್ಬರು ಹೆಂಡತಿಯರು ಅವರ ಹೆಸರು ಯಾಸೀನ ಬೀ ಹಾಗೂ ಮಶಾಕ ಬೀ. ಯಾಸೀನ ಬೀ ಯವರಿಗೆ 4 ಜನ ಗಂಡು ಮಕ್ಕಳು ಒಬ್ಬರು ಹೆಣ್ಣು ಮಕ್ಕಳು. ಮಶಾಕ ಬೀ ಇವರಿಗೆ ಮೀರಸಾಬ ಎಂಬುವವರು ಒಬ್ಬ ಗಂಡು ಮಗ ಎಂದರೆ ಸರಿ. ಮಶಾಕ ಬೀ ಇವರು ಮಹೆಬೂಬ ಸಾಬ ಇವರ ಹೆಂಡತಿ ಎಂದು ತೋರಿಸುವ ನಿಖಾ ನಾಮ ದಾಖಲೆ ಹಾಕಿಲ್ಲ. ನಾನು ಮೀರಸಾಬ ಇವರು ಮಹೆಬೂಬ ಸಾಬ ಇವರ ಮಗ ಎಂದು ತೋರಿಸುವ ದಾಖಲೆ ಹಾಕಿಲ್ಲ. ಸದರಿ ಮಶಾಕ ಬೀ ಮಹೆಬೂಬ ಸಾಬ ಇವರಿಗೆ ಮದುವೆಯಾಗಿಲ್ಲ ಅವರ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ಮೀರಾಸಾಬ ಮಹೆಬೂಬ ಸಾಬ ಇವರ ಮಗ ಅಲ್ಲ ಎಂದರೆ ಸರಿಯಲ್ಲ.

ಮಶಾಕ ಬೀ ಇವರು ದಂಡಗಿ ಸಾಬ ಪಾಳ ಇವರ ಹೆಂಡತಿ ಎಂದರೆ ಸುಳ್ಳು ಎಂದು ಹೇಳುತ್ತಾರೆ. 1 ನೇ ವಾದಿ ಮೀರಾಸಾಬ ಇವರು ದಂಡಗಿ ಸಾಬ ಇವರ ಮಗ ಎಂದರೆ ಸುಳ್ಳು ಎಂದು ಹೇಳುತ್ತಾರೆ. ಖಾಜಾಮೀಯಾ ಇವರು ತೀರಿಕೊಂಡು 16-17 ವರ್ಷ ಆಗಿರುತ್ತದೆ. ಇಮಾಮಮೋದ್ದೀನ ತೀರಿಕೊಂಡು 4 ವರ್ಷ ಆಯಿತು. ನನ್ನ ತಂದೆ ಮಹೆಬೂಬ ಸಾಬ ದಿನಾಂಕ 08-11-2017 ರಲ್ಲಿ ತೀರಿಕೊಂಡಿರುತ್ತಾರೆ. ಸದರಿ ಖಾಜಾಮೀಯಾ ಮತ್ತು ಇಮಾಮಮೊದ್ದೀನ ಇವರು ನನ್ನ ತಂದೆಗಿಂತ ಮೊದಲೇ ತೀರಿಕೊಂಡಿದ್ದರು ಎಂದರೆ ಸರಿ. ಇಮಾವಮೊದ್ದೀನ ತೀರಿಕೊಂಡ ಸಮಯದಲ್ಲಿ ನನ್ನ ತಂದೆ ಜೀವಂತ ಇದ್ದರು.

ಸರ್ವೆ ನಂಬರ 157, 7 ಎಕರೆ 25 ಗುಂಟೆ ಜಮೀನು ಖಾಜಾಮೀಯಾ ಹೆಸರಿನಲ್ಲಿತ್ತು. ನಾವು ವಿಭಾಗ ಮಾಡಿಕೊಂಡಿಲ್ಲ. ಸದರಿ ಜಮೀನನ್ನು ನನ್ನ ತಂದೆ ಖಾಜಾಮೀಯಾ ಇವರ ಹೆಸರಿನಲ್ಲಿ ಖರೀದಿ ಮಾಡಿದ್ದರು ಎಂದು ಸೂಚಿಸುವುದು ಸರಿ. ಈಗ ಅದು ಖಾಜಾಮೀಯಾ ಹೆಂಡತಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಸ್ವತ್ತನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಇಮಾಮಮೊದ್ದೀನ ಹೆಂಡತಿಯ ಹೆಸರು ಮುಮತ್ತಾಜ ಬೇಗಂ. ಅವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಆ ಕಾರಣದಿಂದ ಅವರು ಲಾಲಅಹ್ಮದ ಮಗನಾದ ಸೋಹೇಲ್ ಇವರನ್ನು ಜೋಪಾನ ಮಾಡುತ್ತಿದ್ದರು ಎಂದರೆ ಸರಿ. ಸದರಿ

ಸೊಹೇಲ್ ಈಗಲೂ ಸಹ ಮುಮತ್ತಾಜ್ ಜೋತೆಯಲ್ಲಿರುತ್ತಾರೆ ಎಂದರೆ ಸುಳ್ಳು ಎಂದು ಹೇಳುತ್ತಾರೆ.

ಸರ್ವೆ ನಂಬರ 170/1 ಇದು ಮುಮತ್ತಾಜ ಹಾಗೂ ಸೊಹೇಲ್ ಹೆಸರಿಗೆ 4-5 ವರ್ಷಗಳ ಹಿಂದೆ ಬದಲಾವಣೆಯಾಗಿರುತ್ತದೆ ನಮಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಸದರಿ ಖಾತೆ ಬದಲಾವಣೆ ಆದಾಗ ನನ್ನ ತಂದೆ ಮಹೆಬೂಬ ಸಾಬ್ ಜೀವಂತ ಇದ್ದರು. ನನ್ನ ತಂದೆ ಮತ್ತು ನಮ್ಮಗೆ ಗೊತ್ತಿಲ್ಲದೆ ಬದಲಾವಣೆ ಮಾಡಿಕೊಂಡಿದರಿಂದ ನಾವು ಯಾರು ಅದನ್ನು ಪ್ರಶ್ನೇ ಮಾಡಿರಲಿಲ್ಲ. ಸದರಿ ಸರ್ವೆ ನಂಬರ 170/1 ಮತ್ತು 172/4 ಇವುಗಳನ್ನು ನನ್ನ ತಂದೆ 2009 ರಲ್ಲಿ ಮುಮತ್ತಾಜ್ ಹಾಗೂ ಸೊಹೇಲ್ ಇವರ ಹೆಸರಿಗೆ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದ ಹಾಗೇ ಮಾಡಿದ್ದಾರೆ ಎಂದು ಹೇಳುತ್ತಾರೆ. ಸರ್ವೆ ನಂಬರ 170/1 ಇದು 2009 ರಿಂದ 2017 ರವರೆಗೆ ಅವರ ಹೆಸರಿಗೆ ಇದ್ದು ಅವರೇ ಕಬ್ಜೆ ಇದ್ದರು ಎಂದರೆ ಸಾಕ್ಷಿ ಯಾವುದೇ ಉತ್ತರ ಕೊಟ್ಟಿರುವುದಿಲ್ಲ. ಆನಂತರ ನನ್ನ ತಂದೆ ಅನಾರೋಗ್ಯಗೊಂಡಿದ್ದರಿಂದ ಅವರ ಚಿಕೀತ್ಸೆಯ ಖರ್ಚಿಗಾಗಿ ಸರ್ವೆ ನಂಬರ 170/1 ಇದನ್ನು 4 ನೇ ಪ್ರತಿವಾದಿಗೆ ಮಾರಿದ್ದಾರೆ ಎಂದರೆ ಸಾಕ್ಷಿ ನಾವು ಅವರ ಚಿಕೀತ್ಸೆಗೆ ಹಣ ನೀಡಿದ್ದೇವೆ ಎಂದು ಹೇಳುತ್ತಾರೆ. ನನ್ನ ತಂದೆ ಲಾಲಅಹ್ಮದ ಇವರ ಜೋತೆಯಲ್ಲಿ ಇರುತ್ತಿದ್ದರು.

ಮುಮತ್ತಾಜ್ ಹಾಗೂ ಸೊಹೇಲ್ ಇವರ ಹೆಸರಿಗೆ ಆಸ್ತಿ ಇದ್ದ ಕಾರಣ ಅವರು 4 ನೇ ಪ್ರತಿವಾದಿಗೆ ಖರೀದಿ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದೆ ಹಾಗೆ ಮಾಡಿದ್ದಾರೆ ಎಂದು ಹೇಳುತ್ತಾರೆ. 2 ಮತ್ತು 3 ನೇ ಪ್ರತಿವಾದಿಗಳು 4 ನೇ ಪ್ರತಿವಾದಿಯಿಂದ ಹಣ ಪಡೆದು ಮಾರಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಖಾಜಾಮೀಯ ಮತ್ತು ಇಮಾಮಮೊದ್ದೀನ ಇವರು ನನ್ನ ತಂದೆ ಸಾಯುವ ಮೊದಲೇ ತೀರಿಕೊಂಡಿದ್ದರಿಂದ ಅವರಿಗೆ ಯಾವುದೇ ಹಕ್ಕು ಇಲ್ಲ ಎಂದು ಹೇಳುವುದು ಸರಿಯಲ್ಲ. ಈ ವಿಚಾರ ಎಲ್ಲವು ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 4 ನೇ ಪ್ರತಿವಾದಿ ಗೈರು ಹಾಜರಿದ್ದು ಹಾಗಾಗೀ ಪಾಟಿ ಸವಾಲು ಇಲ್ಲ ಎಂದು ತೇಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿತ್ತಾಪೂರ